**ಸಾಕ್ಷಿಯನ್ನು ದಿಃ *19/08/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು ಃ ಶ್ರೀ ಎಎಸಎಸ ವಕೀಲರಿಂದ ಎದುರುದಾರರ ಪರವಾಗಿ.**

ನಾವು ಟೆಸ್ಟ ಡ್ರೈವಗಾಗಿ ಸದರಿ ಮೋಟಾರುಸೈಕಲನ್ನು ಮದ್ಯಾಹ್ನ 3-35 ಸುಮಾರಿಗೆ ಹೊರಗೆ ತೆಗೆದುಕೊಂಡು ಹೋಗಿದ್ದೇವು. ನಾವುಗಳು ಗೇಟಪಾಸನ್ನು ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಸಾಮಾನ್ಯವಾಗಿ ಟೆಸ್ಟ ಡ್ರೈವಗೆ ಹೋಗಬೇಕಾದರೆ ನನಗೆ ಹೇಳಿ ಹೋಗುತ್ತಾರೆ ಅಥವಾ ವಾಹನಗಳಲ್ಲಿ ಯಾವುದಾದರೂ ತೊಂದರೆಗಳು ಇದ್ದರೆ ನನ್ನನು ಸಹ ಜೊತೆಗೆ ಕರೆದುಕೊಂಡು ಹೋಗುತ್ತಾರೆ. ಟೆಸ್ಟ ಡ್ರೈವಗೆ ಹೋಗುವುದು ನನಗೆ ಆಯೋಜಿಸಿದ ಕೆಲಸವಲ್ಲ ಎಂದರೆ ಸರಿಯಲ್ಲ. ಟೆಸ್ಟ ಡ್ರೈವಗಾಗಿ ನಮ್ಮ ಅಡವೈಸರಗೆ ಹೇಳಿ ಹೋಗಿದ್ದೇವು. ವಾಹನದ ಕುರಿತು ಕೊಡುವ ಜಾಬ ಕಾರ್ಡನಲ್ಲಿ ಅದರಲ್ಲಿ ಸಂಬಂಧಪಟ್ಟಿರುವ ದುರಸ್ತಿಯನ್ನು ನಮೂದಿಸಲಾಗಿರುತ್ತದೆ ಎಂದರೆ ನಿಜ.

ಸದರಿ ವಾಹನದಲ್ಲಿ ಯಾವ ತೊಂದರೆಗಳು ಇದ್ದವು ಎಂದು ಗ್ರಾಹಕರು ಹೇಳಿದ್ದಾರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಗ್ರಾಹಕರು ಹೇಳಬೇಕಾಗಿಲ್ಲ, ಸದರಿ ವಾಹನವನ್ನು ಪರೀಕ್ಷಿಸಿದರೆ ತೊಂದರೆಗಳು ಗೊತ್ತಾಗುತ್ತವೆ ಎಂದು ಉತ್ತರಿಸುತ್ತಾರೆ. ಸದರಿ ಮೋಟಾರುಸೈಕಲಗೆ ಜರ್ಕಿಂಗ ಸಮಸ್ಯೆ ಇತ್ತು. ಸದರಿ ಸಮಸ್ಯೆ ಜಾಬಕಾರ್ಡನಲ್ಲಿ ನಮೂದು ಇರಬಹುದು.

ಪೊಲೀಸರು ಅಪಘಾತವಾದ ನಂತರ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಸದರಿ ಹೇಳಿಕೆಯಲ್ಲಿ ಅಪಘಾತವು ವಾಹಿದ ಇವರ ತಪ್ಪಿನಿಂದ ಆಗಿದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಶೋರೂಮನಲ್ಲಿ ಬಯೋಮೆಟ್ರಿಕ ವ್ಯವಸ್ಥೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಮೋಟಾರುಸೈಕಲ ನಮ್ಮ ಶೋರೂಮಗೆ ದುರಸ್ತಿಗಾಗಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೋಟಾರುಸೈಕಲನ್ನು ನಾನು ಮತ್ತು ವಾಹಿದ ಇವರು ನಮ್ಮ ವೈಯಕ್ತಿಕ ಕೆಲಸಕ್ಕಾಗಿ ತೆಗೆದುಕೊಂಡು ಹೋಗಿರುತ್ತೇವೆ ಎಂದರೆ ಸುಳ್ಳು.

ನನಗೆ ಮಾಸಿಕ 8,500/- ಸಂಬಳವಿರುವ ಕುರಿತು ದಾಖಲೆ ಹಾಜರುಪಡಿಸಿದ್ದೇನೆ. ನನ್ನ ವೈದ್ಯಕೀಯ ವೆಚ್ಚ ಖರ್ಚು ಮಾಡಿರುವ ಹಣದ ದಾಖಲೆ ಮತ್ತು ಪುರಾವೆ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಬಿಲ್ಲುಗಳು ನನ್ನ ಅನುಕೂಲಕ್ಕಾಗಿ ನಾನೇ ಸೃಷ್ಟೀಕರಣ ಮಾಡಿರುವ ಖೊಟ್ಟಿ ದಾಖಲಾತಿಗಳು

ಎಂದರೆ ಸರಿಯಲ್ಲ. ಸದರಿ ಅಪಘಾತ ವಾಹಿದ ಇವರಿಂದ ಆಗಿರುತ್ತದೆ ಹೊರತು ಎದುರುಗಡೆಯಿಂದ ಬರುವ ವಾಹನದಿಂದ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ಕರ್ತವ್ಯದ ಸಮಯದಲ್ಲಿ ಅಗಿರುವ ಅಪಘಾತವಲ್ಲ ಎಂದರೆ ಸರಿಯಲ್ಲ. ಈ ರೀತಿ ಇರುವ ಕಾರಣ ಎದುರುದಾರರು ಯಾವುದೇ ಪರಿಹಾರ ಹಣ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ವಿಶೇಷ ನ್ಯೂನತೆ ಆಗಿರುತ್ತದೆ ಎಂದು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿ ಮತ್ತು ಪ್ರಮಾಣಪತ್ರದಲ್ಲಿ ಬರೆದುಕೊಂಡಿರುವ ವಿಷಯ ಸಂಗತಿಗಳು ಸಂಪೂರ್ಣ ಸುಳ್ಳು ಇದ್ದು, ಅದರಂತೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನಾನು ಹೆಲ್ಮೇಟ ಹಾಕಿರಲಿಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.